# ಈ ಲೇಖನದ ವಿಷಯಾನುಕ್ರಮಣಿಕೆ


ದಂತಧಾವನದಲ್ಲಿ ವಿಧಿ-ನಿಷೇಧಗಳು 2

ಹಲ್ಲುಜ್ಜದೇ ದೇವರಪೂಜೆ ಮಾಡುವದು ಅಪರಾಧ 2

ಮಧ್ಯಾಹ್ನ ಹಲ್ಲುಜ್ಜಬಾರದು 3

ಸೂರ್ಯೋದಯಕ್ಕೆ ಮುಂಚೆಯೇ ದಂತಧಾವನ 4

ಸ್ನಾನಕ್ಕಿಂತ ಮುಂಚೆಯೇ ದಂತಧಾವನ 5

ಶೌಚಕ್ಕಿಂತ ಮುಂಚೆಯೂ ಮಾಡಬಹುದು 5

ಶ್ರೋತ್ರಾಚಮನ ಮಾಡಿ ದಂತಧಾವನ 8

ನಿಷಿದ್ಧ ದಂತಕಾಷ್ಠಗಳು 12

ದಂತಕಾಷ್ಠದ ಲಕ್ಷಣಗಳು 15

ದಂತಕಾಷ್ಠದ ಗಾತ್ರ 16

ವಿಹಿತ ಕಾಷ್ಠಗಳು 18

ದಂತಧಾವನದಲ್ಲಿ ದಿಕ್ಕುಗಳು 18

ಹಲ್ಲುಜ್ಜುವ ಕ್ರಮ 21

ಉಳಿದ ಕಾಷ್ಠವನ್ನು ನೈರುತ್ಯದಲ್ಲಿ ಹಾಕಬೇಕು 22

ದಂತಧಾವನಕ್ಕೆ ನಿಷಿದ್ಧದಿವಸಗಳು 23

ನಿಷಿದ್ಧದಿವಸಗಳಲ್ಲಿ ಹಲ್ಲನ್ನು ಸ್ವಚ್ಛಗೊಳಿಸುವ ಕ್ರಮ 24

# ವಿಶ್ವನಂದಿನಿ ಲೇಖನಮಾಲೆ — 223

## ದಂತಧಾವನದಲ್ಲಿ ವಿಧಿ-ನಿಷೇಧಗಳು

ಶ್ರೀಮದಾಚಾರ್ಯರ ಸದಾಚಾರಸ್ಮೃತಿಯಲ್ಲಿನ **"ಸ್ಮೃತ್ವಾವಿಷ್ಣುಂ ಸಮುತ್ಥಾಯ ಕೃತಶೌಚೋ ಯಥಾವಿಧಿ"** ಎಂಬ ಮಾತುಗಳನ್ನು ಯಥಾಶಕ್ತಿ ಅರ್ಥ ಮಾಡಿಕೊಂಡೆವು. ಈಗ ಭಗವತ್ಪಾದರ ಪಾದಪದ್ಮಗಳನ್ನು ಭಕ್ತಿಯಿಂದ ನೆನೆದು, ಸಮಗ್ರ ಗುರುಪರಂಪರೆಗೆ ವಂದಿಸಿ ಮುಂದಿನ **ಧೌತದಂತಃ** ಎಂಬ ಮಾತನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

## ಹಲ್ಲುಜ್ಜದೇ ದೇವರಪೂಜೆ ಮಾಡುವದು ಅಪರಾಧ

ಹಲ್ಲುಜ್ಜದೇ ದೇವರಪೂಜೆಯನ್ನು ಮಾಡುವದು ಮೂವತ್ತೆರಡು ಅಪರಾಧಗಳಲ್ಲಿ ಎರಡನೆಯ ಅಪರಾಧ.

## ಭುಕ್ತ್ವಾ ಪೀತ್ವಾರ್ಚನಂ ದಂತ-ಕಾಷ್ಠಾಭಕ್ಷ್ಯುಪಸರ್ಪಣಮ್

ತಿಂದು ಕುಡಿದು ದೇವರ ಪೂಜೆ ಮಾಡುವದು ಮೊದಲನೆಯ ಅಪರಾಧ. ದಂತಧಾವನವನ್ನು ಮಾಡದೇ ದೇವರ ಪೂಜೆಯನ್ನು ಮಾಡುವದು ಎರಡನೆಯ ಅಪರಾಧ.

ದೇವರಪೂಜೆಯಷ್ಟೇ ಅಲ್ಲ, ಹಲ್ಲುಜ್ಜದೇ ದೇವರ ಮನೆಯ ಒಳಗೆ ಹೋಗುವದೂ ಸಹಿತ ತಪ್ಪು.

ಯಾವ ದಿವಸಗಳಲ್ಲಿ ದಂತಕಾಷ್ಠದಿಂದ ಹಲ್ಲುಜ್ಜಬಾರದು ಎಂಬ ನಿಯಮವಿದೆಯೋ, ಆ ದಿವಸವೂ ಎಲೆಗಳಿಂದ ಹಲ್ಲುಜ್ಜಬೇಕು ಅಥವಾ ಹೆಬ್ಬೆರಳು, ಉಂಗುರದ ಬೆರಳುಗಳಿಂದ ಹಲ್ಲುಜ್ಜಿ ಬಾಯಿಯನ್ನು ಚನ್ನಾಗಿ ಮುಕ್ಕಳಿಸಬೇಕು.

## ಮಧ್ಯಾಹ್ನ ಹಲ್ಲುಜ್ಜಬಾರದು

ಪೂಜೆಗಾಗಿ ಮಧ್ಯಾಹ್ನಕಾಲದಲ್ಲಿ ಸ್ನಾನವನ್ನು ಶಾಸ್ತ್ರ ವಿಧಿಸುತ್ತದೆ. ಮಧ್ಯಾಹ್ನ ಹೇಗೂ ಸ್ನಾನವಿದೆ ಎಂದು ಮಧ್ಯಾಹ್ನದವರೆಗೆ ಹಲ್ಲುಜ್ಜದೆ, ಮಧ್ಯಾಹ್ನದ

ಸ್ನಾನಕಾಲದಲ್ಲಿ ಹಲ್ಲುಜ್ಜಿದ್ದರೆ ದೇವತೆಗಳು ಪಿತೃಗಳು ನಿರಾಶರಾಗಿ ಹಿಂತಿರುಗುತ್ತಾರೆ ಎಂಬ ಮಾತನ್ನು ಪ್ರಚೇತಸರು ತಿಳಿಸುತ್ತಾರೆ —

**ಮಧ್ಯಾಹ್ನೇ ಸ್ನಾನಕಾಲೇ ತು**
**ಯಃ ಕುರ್ಯಾದ್ ದಂತಧಾವನಮ್ ।**
**ನಿರಾಶಾಸ್ತಸ್ಯ ಗಚ್ಛಂತಿ**
**ದೇವಾಃ ಪಿತೃಗಣೈಃ ಸಹ ।**

ಹೀಗಾಗಿ ಬೆಳಿಗ್ಗೆ ಎದ್ದ ಕೂಡಲೇ ಹಲ್ಲುಜ್ಜಬೇಕು. ಬಾಯಿವಾಸನೆಯಿಟ್ಟುಕೊಂಡು ಮತ್ತೊಬ್ಬರೊಂದಿಗೆ ಮಾತು ಸಹ ಆಡಬಾರದು. ಅಂತಹುದರಲ್ಲಿ ಪ್ರಾತಃಸ್ತೋತ್ರಗಳನ್ನು ಹೇಗೆ ಹೇಳುವದು?

## ಸೂರ್ಯೋದಯಕ್ಕೆ ಮುಂಚೆಯೇ ದಂತಧಾವನ

ಆಪಸ್ತಂಬಮಹರ್ಷಿಗಳು ತಿಳಿಸುತ್ತಾರೆ —

**ಪುರೋದಯಾದ್ ರವೇರದ್ಯಾತ್**
**ನೋದಿತೇಽಸ್ತಮಿತೇ ರವೌ**

ಸೂರ್ಯೋದಯಕ್ಕಿಂತ ಮುಂಚೆಯೇ ದಂತಶೋಧನವನ್ನು ಮಾಡಬೇಕು. ಸೂರ್ಯೋದಯವಾದ ಮೇಲೂ ಮಾಡಬಾರದು, ಸೂರ್ಯಾಸ್ತದ ನಂತರವೂ ಮಾಡಬಾರದು.

## ಸ್ನಾನಕ್ಕಿಂತ ಮುಂಚೆಯೇ ದಂತಧಾವನ

ಸ್ನಾನಕ್ಕಿಂತಲೂ ಮುಂಚೆ ದಂತಶುದ್ಧಿಯನ್ನು ಮಾಡಿಕೊಳ್ಳಬೇಕು ಎನ್ನುವದರಲ್ಲಿ ಲೌಕಿಕರದೂ ವಿವಾದವಿಲ್ಲ. ಶಾಸ್ತ್ರಗಳಲ್ಲಿಯೂ ವಿವಾದವಿಲ್ಲ. ಆದರೆ ಎಲ್ಲ ಧರ್ಮಶಾಸ್ತ್ರಗಳಲ್ಲಿ ಶೌಚವಿಧಿಯ ನಂತರ ದಂತಧಾವನವನ್ನು ಹೇಳಿರುವದರಿಂದ ಮಲಮೂತ್ರವಿಸರ್ಜನೆಯ ಸಂದರ್ಭವಿಲ್ಲದೇ ಇದ್ದರೆ ದಂತಧಾವನವನ್ನು ಮಾಡಬಾರದೇ ಎಂಬ ಪ್ರಶ್ನೆ ಕೆಲವರಿಗೆ ಮೂಡಬಹುದು.

**ಮೊದಲಿಗೆ ದಂತಧಾವನವನ್ನು ಮಾಡಿ ನಂತರ ಮಲವಿಸರ್ಜನೆ ಮಾಡಬಹುದೆ ಎಂಬ ಪ್ರಶ್ನೆಯೂ ಇದ್ದೇ ಇದೆ.**

## ಶೌಚಕ್ಕಿಂತ ಮುಂಚೆಯೂ ಮಾಡಬಹುದು

ಮಲವಿಸರ್ಜನೆ ದೇಹದ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿರುವದರಿಂದ, ಕೆಲವು ಬಾರಿ ಬೆಳಿಗ್ಗೆ ಎದ್ದ ತಕ್ಷಣ ಮಲವಿಸರ್ಜನೆಯ ಸಂದರ್ಭ ಇಲ್ಲದೇ ಇರಬಹುದು. ಅಂತಹ ಪರಿಸ್ಥಿತಿಯಲ್ಲಿ ದಂತಧಾವನ ಸ್ನಾನಾದಿಗಳನ್ನು ಮಾಡಬಹುದು.

ಆದರೆ, ಮಲಮೂತ್ರ ಬಂಧನವನ್ನು ಸರ್ವಥಾ ಮಾಡಬಾರದು. ಮಲಮೂತ್ರಗಳನ್ನು ಬಲವಂತವಾಗಿ ತಡೆಹಿಡಿಯುವದರಿಂದ ಕಿವುಡತನ, ಕುರುಡುತನ ಉಂಟಾಗುತ್ತದೆ ಎಂದು ವೈದ್ಯಶಾಸ್ತ್ರ ಹೇಳುತ್ತದೆ — **ಮೂತ್ರಸಂಧಾ-ರಣಾದಂಧೋ ಬಧಿರೋ ಮಲಧಾರಣಾತ್.** ಮೂತ್ರವನ್ನು ತಡೆಹಿಡಿಯುವದರಿಂದ ಕುರುಡುತನ ಉಂಟಾಗುತ್ತದೆ. ಮಲವನ್ನು ಬಲವಂತವಾಗಿ ತಡೆಹಿಡಿಯುವದರಿಂದ ಕಿವುಡನಾಗುತ್ತಾನೆ.

ಹೀಗಾಗಿ ಮಲಮೂತ್ರಗಳನ್ನು ಸರ್ವಥಾ ತಡೆಹಿಡಿಯಬಾರದು. ಆದರೆ ಅದರ ಸಂದರ್ಭವಿಲ್ಲವಾದಲ್ಲಿ ಮೊದಲಿಗೆ ದಂತಧಾವನವನ್ನು ಮುಗಿಸಿ ನಂತರದಲ್ಲಿ ಶೌಚ ಮಾಡಬಹುದು.

ಆದರೆ ಸ್ನಾನಕ್ಕಿಂತಲೂ ಮುಂಚೆ ದಂತಧಾವನ-ವಾಗಿರಲೇಬೇಕು. ಈ ಮಾತನ್ನು ಛಂದೋಗ-ಪರಿಶಿಷ್ಟ ತಿಳಿಸುತ್ತದೆ — **"ದಂತಾನ್ ಪ್ರಕ್ಷಾಲ್ಯ ಸ್ನಾಯಾತ್"** ಎಂದು. ಇದರ ಅರ್ಥವನ್ನು ದಕ್ಷಪ್ರಜಾಪತಿ ತಿಳಿಸುತ್ತಾರೆ —

**ತತಃ ಸ್ನಾನಂ ಪ್ರಕುರ್ವೀತ**
**ದಂತಧಾವನಪೂರ್ವಕಮ್**

ಸ್ನಾನಕ್ಕಿಂತಲೂ ಮುಂಚೆಯೇ ದಂತಧಾವನ. ಸ್ನಾನದ ನಂತರವಲ್ಲ.

**ಶೌಚದ ನಂತರ ಕೈಕಾಲುಗಳನ್ನು ತೊಳೆದ ನಂತರ ಕಿವಿಯಿಂದ ಜನಿವಾರವನ್ನು ತೆಗೆದು, ಮಾಲಾಕಾರವಾಗಿದ್ದನ್ನು ಸರಿಯಾಗಿ ಧರಿಸಿ, ಆಚಮನವನ್ನು ಮಾಡಿ ನಂತರದಲ್ಲಿ ದಂತಧಾವನವನ್ನು ಮಾಡಬೇಕು.**

## ಶ್ರೋತ್ರಾಚಮನ ಮಾಡಿ ದಂತಧಾವನ

ಆಚಮನ ಮಾಡಿಯೇ ದಂತಧಾವನವನ್ನು ಮಾಡಬೇಕು ಎನ್ನುವದು ಶಾಸ್ತ್ರಗಳ ಅಭಿಮತ. ಶ್ರೀ ಸ್ಮೃತಿಮುಕ್ತಾವಳೀ ಕೃಷ್ಣಾಚಾರ್ಯರು ಸದಾಚಾರಸ್ಮೃತಿಯ ವ್ಯಾಖ್ಯಾನದಲ್ಲಿ ತಿಳಿಸುತ್ತಾರೆ.

**ಪಾದೌ ಪ್ರಕ್ಷಾಲ್ಯ ಚಾಚಮ್ಯ**
**ದಂತಧಾವನಮಾಚರೇತ್**

ಕಾಲ್ಗಳನ್ನು ತೊಳೆದು, ಆಚಮನ ಮಾಡಿ ದಂತಧಾವನವನ್ನು ಮಾಡಬೇಕು ಎಂದು.

ಶ್ರೀಮದಾಚಾರ್ಯರು **ಧೌತದಂತಃ ಸಮಾಚಮ್ಯ ಸ್ನಾನಂ ಕುರ್ಯಾತ್** ಎಂದು ಹೇಳಿದ್ದಾರೆ. ಈ ವಾಕ್ಯವನ್ನು ನೋಡಿದರೆ, ಹಲ್ಲುಜ್ಜಿ ಆಚಮನ ಮಾಡಿ ಸ್ನಾನವನ್ನು ಮಾಡಬೇಕು ಎಂದು ತೋರುತ್ತದೆ. ಆದರೆ ಶ್ರೀಮಧ್ವಾನುಜಾಚಾರ್ಯರು ಶ್ರೀಮದಾಚಾರ್ಯರ ಅಭಿಪ್ರಾಯವನ್ನು ನಮಗೆ ಸಂನ್ಯಾಸಪದ್ಧತಿಯಲ್ಲಿ ತಿಳಿಸಿ ಹೇಳುತ್ತಾರೆ.

ಸಂನ್ಯಾಸಪದ್ಧತಿಯಲ್ಲಿ ಮೊದಲಿಗೆ ಶೌಚವಿಧಿ ಆ ನಂತರ ವಿಸ್ತಾರವಾಗಿ ಆಚಮನದ ಕ್ರಮದ ನಿರೂಪಣೆ ಆ ನಂತರ ದಂತಧಾವನ, ಆ ಬಳಿಕ ಸ್ನಾನ ಇದೇ ಕ್ರಮದಲ್ಲಿಯೇ ನಿರೂಪಣೆ ಮಾಡಿದ್ದಾರೆ.

ಎಲ್ಲದಕ್ಕಿಂತ ಮುಖ್ಯವಾಗಿ ದಂತಧಾವನಕ್ಕಿಂತಲೂ ಮುಂಚೆ ಮತ್ತು ಸ್ನಾನಕ್ಕಿಂತಲೂ ಮುಂಚೆ, ಎರಡು ಬಾರಿಯೂ ಆಚಮನವನ್ನು ಸಂನ್ಯಾಸಪದ್ಧತಿ ವಿಧಿಸುತ್ತದೆ — **"ತಥಾಚಾಮೇತ್", "ಪುನರಾಚಮನಂ ಚರೇತ್"** ಎಂದು.

ಅಂದರೆ ದಂತಧಾವನಕ್ಕಿಂತಲೂ ಮುಂಚೆ ಆಚಮನ ಮಾಡಬೇಕು ಎಂಬ ವಿಧಿಯನ್ನು ಅವರು ಪುಷ್ಟೀಕರಿಸಿ, **ಸಮಾಚಮ್ಯ ಧೌತದಂತಃ, ಸಮಚಾಮ್ಯ ಸ್ನಾನಂ ಕುರ್ಯಾತ್** ಎಂದು ಶ್ರೀಮದಾಚಾರ್ಯರ ವಾಕ್ಯದಲ್ಲಿ ಅನ್ವಯವನ್ನು ಮಾಡಿಕೊಳ್ಳಬೇಕು ಎನ್ನುವದನ್ನು ಸೂಚಿಸಿದರು.

## ಶಾಸ್ತ್ರದ ವಿಧಿ ಸರಿ, ಆದರೆ ಹಲ್ಲುಜ್ಜದೇ ಆಚಮನ ಮಾಡುವದು ಅಷ್ಟು ಸೂಕ್ತವೇ ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಪಡೆಯೋಣ.

ಶೌಚದ ಸಂದರ್ಭದಲ್ಲಿ ಹನ್ನೆರಡು ಬಾಯಿಮುಕ್ಕಳಿಸಿರುವದರಿಂದಲೇ ಬಾಯಿಯ ದೋಷ ಸಾಕಷ್ಟು ನಿವಾರಣೆಯಾಗಿರುತ್ತದೆ.

ಅದಕ್ಕಿಂತ ಮುಖ್ಯವಾಗಿ ಇವತ್ತಿನ ದಿನಗಳಲ್ಲಿ ಜನರೆಲ್ಲ ಬ್ರಷ್ ಪೇಸ್ಟುಗಳಿಂದ ಹಲ್ಲುಜ್ಜುತ್ತಾರೆ. ದಂತಕಾಷ್ಠಗಳನ್ನು ಬಳಸುವದೇ ಇಲ್ಲ. ದಂತಕಾಷ್ಠಗಳಿಂದ ಹಲ್ಲುಜ್ಜಿದಾಗ ಹಲ್ಲಿನ ದುರ್ವಾಸನೆಯಾಗಲೀ, ಹಲ್ಲು ಹಳದಿ ಬಣ್ಣಕ್ಕೆ ತಿರುಗುವದಾಗಲೀ ಆಗುವದೇ ಇಲ್ಲ. ಪ್ರತೀನಿತ್ಯ ದಂತಕಾಷ್ಠದಿಂದ ಹಲ್ಲುಜ್ಜುವ ವ್ಯಕ್ತಿ ಸತತ ಮೂರು ದಿವಸ ಹಲ್ಲುಜ್ಜದೇ ಇದ್ದರೂ ಬಾಯಲ್ಲಿ ದುರ್ವಾಸನೆ ಮೂಡುವದಿಲ್ಲ. ಹೀಗಾಗಿ ನಮ್ಮ ಪ್ರಾಚೀನರಿಗೆ ಹಲ್ಲುಜ್ಜುವದಕ್ಕಿಂತ ಮುಂಚೆ ಆಚಮನ ಮಾಡುವದಕ್ಕೆ ಯಾವ ಸಮಸ್ಯೆಯೂ ಇರಲಿಲ್ಲ. ಹೀಗಾಗಿ ಅವರು ಮುಖ್ಯವಾದ ಆಚಮನವನ್ನೇ ಮಾಡುತ್ತಿದ್ದರು.

ಈಗಿನ ಕಾಲದವರು ಶ್ರೋತ್ರಾಚಾಮನ ಮಾಡಬೇಕು. (ಬಲಗಿವಿಯಲ್ಲಿ ಸಕಲ ತೀರ್ಥಗಳ ಸನ್ನಿಧಾನವಿರುವದರಿಂದ ಬಲಗೈಯಿಂದ ಅದನ್ನು ಮುಟ್ಟಿದಾಗ ಆಚಮನದ ಶುದ್ಧಿ ದೊರೆಯುತ್ತದೆ.)

ಸ್ನಾನಕ್ಕಿಂತ ಮುಂಚೆ ಆಚಮನ ಮಾಡಬಹುದೇ ಎನ್ನುವ ಪ್ರಶ್ನೆಗೆ ಉತ್ತರವನ್ನು ಆಚಮನದ ಕುರಿತು ಬರೆಯುವಾಗ ತಿಳಿಸುತ್ತೇನೆ.

## ನಿಷಿದ್ಧ ದಂತಕಾಷ್ಠಗಳು

ಮಹಾಭಾರತಾದಿ ಶಾಸ್ತ್ರಗಳು ದಂತಕಾಷ್ಠಗಳಿಂದ ದಂತಧಾವನವನ್ನು ತಿಳಿಸುತ್ತವೆ. ಅವುಗಳ ಮಹತ್ತ್ವ, ಹಿಂದಿರುವ ವೈಜ್ಞಾನಿಕತೆ, ಉಂಟಾಗುವ ಪ್ರಯೋಜನಗಳನ್ನು ಅರಿತ ಮನುಷ್ಯ ಇಂದಿನ ಬ್ರಷ್ ಪೇಸ್ಟುಗಳನ್ನು ಉಪಯೋಗಿಸುವದೇ ಇಲ್ಲ.

ಯಾವ ದಂತಕಾಷ್ಠದಿಂದ ಯಾವ ಪ್ರಯೋಜನ-ವುಂಟಾಗುತ್ತದೆ ಎನ್ನುವದನ್ನು ಹಿಂದಿನ ಲೇಖನದಲ್ಲಿ ವಿಸ್ತಾರವಾಗಿ ತಿಳಿದಿದ್ದೇವೆ.

ಯಾವ ಮರದ ಕಡ್ಡಿಗಳನ್ನು ಹಲ್ಲುಜ್ಜಲು ಉಪಯೋಗಿಸಬಾರದು ಎನ್ನುವದನ್ನೂ ಸಹ ಶಾಸ್ತ್ರಗಳು ಸ್ಪಷ್ಟವಾಗಿ ತಿಳಿಸುತ್ತವೆ.

ಮಹಾಭಾರತದ ವಚನ ಹೀಗಿದೆ —

**ತ್ಯಾಜ್ಯಂ ಸಪತ್ರಮಜ್ಞಾತಂ**
**ಊರ್ಧ್ವಶುಷ್ಕಂ ಚ ಪಾಟಿತಮ್**
**ತ್ವಗ್ವಿಹೀನಂ ಗ್ರಂಥಿಮುಖಂ**
**ತಥಾ ಪಾಲಾಶಶಾಂಶಪಮ್**

**ಋಜುಂ ವಿತಸ್ತಿ ಮಾತ್ರಂ ಚ**
**ಕೀಟಾಗ್ನಿಭಿರದೂಷಿತಮ್**

ಎಲೆಯಿಂದ ಕೂಡಿದ ಕಡ್ಡಿ, ಪೂರ್ಣವಾಗಿ ಒಣಗಿ ಟೊಳ್ಳಾದ ಕಡ್ಡಿ, ಮುರಿದು ಹೋದ ಕಡ್ಡಿ, ತೊಗಟೆಯಿಲ್ಲದ ಕಡ್ಡಿ, ಗಂಟು ಗಂಟಾಗಿರುವ ಮುತ್ತುಗ ಮತ್ತು ಅಶೋಕವೃಕ್ಷಗಳ ಕಡ್ಡಿ[1], ಕೀಟಗಳಿಂದ ಬೆಂಕಿಯಿಂದ ನಾಶವಾಗಿರುವ ಕಡ್ಡಿ ಇವುಗಳಿಂದ ಹಲ್ಲುಜ್ಜಬಾರದು.

ಯಾವಯಾವ ವೃಕ್ಷಗಳ ಕಡ್ಡಿಗಳನ್ನು ದಂತಕಾಷ್ಠಕ್ಕಾಗಿ ಉಪಯೋಗಿಸುವಂತಿಲ್ಲ ಎಂದು ಯಾಜ್ಞವಲ್ಕ್ಯರು ತಿಳಿಸುತ್ತಾರೆ —

**ತಿಂದುಕೇಂಗುದ-ಬಂಧೂಕ-**
**ಮೋಚಕಾರಜಸಿಂಧುಕಮ್**
**ಕಾರ್ಪಾಸಂ ದಂತಕಾಷ್ಠಂ ಚ**

---

[1] ಮುತ್ತುಗದ ಕಡ್ಡಿಯಿಂದ ದಂತಧಾವನ ಮಾಡುವದರಿಂದ ಸಕಲ ಕಾರ್ಯಗಳಲ್ಲಿ ಸಿದ್ಧಿಯುಂಟಾಗುತ್ತದೆ ಎಂದು ಹಿಂದೆ ತಿಳಿದೆವು. ಹಾಗೆಂದು ದೋಷಯುಕ್ತವಾದ ಕಡ್ಡಿಯನ್ನು ಬಳಸುವಂತಿಲ್ಲ ಎಂದು ಮಹಾಭಾರತ ಈ ಮುಖಾಂತರ ತಿಳಿಸುತ್ತಿದೆ.

## ವಿಷ್ಣೋರಪಿ ಹರೇಚ್ಛ್ರಿಯಮ್

ತಿಂದುಕ ಎಂದರೆ ತೂಬರೆ ಗಿಡ.

ಇಂಗುದೀ ಎಂದರೆ ಗಾರೆಗಿಡ.

ಮೋಚ ಎಂದರೆ ನುಗ್ಗೇ ಗಿಡ.

ಸಿಂಧುಕ ಎಂದರೆ ಸಿಂಧುವಾರ, ವಾವಿಲಿಗಿಡ.

ಕಾರ್ಪಾಸ ಎಂದರೆ ಹತ್ತಿಯ ಗಿಡ.

ಬಂಧೂಕ ಎಂದರೆ ಬಂದುಗೆ.

**ನಾದಂಡಂ ನ ತ್ವಚಾ ಹೀನಂ**
**ನಾಪ್ರಶಸ್ತತರೂದ್ಭವಮ್**
**ಸ್ನುಹಿ-ಕಿಂಶುಕ-ಶಾಲ್ಮಲೀ-**
**ಕರಂಜಾದೀಂಶ್ಚ ವರ್ಜಯೇತ್**

**ಕೋವಿದಾರೇಂಗುದಾಂಶ್ಚೈವ**
**ಶಾಲ್ಮಲೀವೃಕ್ಷಸಿಹ್ಲಕಾಃ**
**ಶ್ಯಾಮಾಕಂ ಪಾರಿಭದ್ರಂ ಚ**
**ಗುಗ್ಗುಲಂ ಪಿಚ್ಛಲಂ ತಥಾ**

**ಪೂತಿಗಂಧಾಮ್ಲಮಧುರಂ**
**ಸುಶಿರಂ ದಂತಧಾವನಮ್**
**ಪ್ರತೀಚೀಂ ದಕ್ಷಿಣಾಶಾಂ ಚ**
**ವರ್ಜಯೇದ್ ದಂತಧಾವನೇ**

**ಬಂಧೂಕ, ಕರಂಜ, ಕದಂಬ ಮುಂತಾದ ವೃಕ್ಷಗಳ ಕಡ್ಡಿಯನ್ನು ದಂತಧಾವನಕ್ಕೆ ಬಳಸಬಾರದು ಎಂದೂ ವಚನಗಳಿರುವದರಿಂದ ಅವನ್ನು ಅತಿಯಾಗಿ ಬಳಸಬಾರದು ಎಂದು ಅರ್ಥವನ್ನು ಮಾಡಿಕೊಳ್ಳಬೇಕು.**

## ದಂತಕಾಷ್ಠದ ಲಕ್ಷಣಗಳು

ಕಹಿಯಾಗಿರಬೇಕು. ಪೂರ್ಣ ಎಳಸೂ ಆಗಿರಬಾರದು. ಪೂರ್ಣ ಒಣಗಿಯೂ ಇರಬಾರದು.

## ದಂತಕಾಷ್ಠದ ಗಾತ್ರ

ನಾವು ಉಪಯೋಗಿಸುವ ದಂತಕಾಷ್ಠದ ದಪ್ಪ, ಉದ್ದ ಎಷ್ಟಿರಬೇಕು ಎನ್ನುವದನ್ನು ಕೂರ್ಮಪುರಾಣ ತಿಳಿಸುತ್ತದೆ —

**ಮಧ್ಯಾಂಗುಲಿಸಮಸ್ಥೌಲ್ಯಂ**
**ದ್ವಾದಶಾಂಗುಲಸಮ್ಮಿತಮ್ ।**
**ಸತ್ವಚಂ ದಂತಕಾಷ್ಠಂ ಸ್ಯಾತ್**
**ತದಗ್ರೇಣ ತು ಧಾವಯೇತ್ ।**

ನಮ್ಮ ಮಧ್ಯದ ಬೆರಳಿನಷ್ಟು ದಪ್ಪ ಇರಬೇಕು. 12 ಅಂಗುಲಕ್ಕಿಂತ ಹೆಚ್ಚು ಉದ್ದ ಇರಬಾರದು. ಆ ಕಟ್ಟಿಗೆಗೆ ತೊಗಟೆ (ಚರ್ಮ) ಇರಲೇಬೇಕು. ಅಂತಹ ದಂತಕಾಷ್ಠದ ಅಗ್ರಭಾಗದಿಂದ ಹಲ್ಲುಜ್ಜಬೇಕು.

ಗರ್ಗಾಚಾರ್ಯರು ಇನ್ನೂ ವಿಶದವಾಗಿ ತಿಳಿಸಿದ್ದಾರೆ

**ದಶಾಂಗುಲಂ ತು ವಿಪ್ರಾಣಾಂ**
**ಕ್ಷತ್ರಿಯಾಣಾಂ ನವಾಂಗುಲಮ್ ।**
**ಅಷ್ಟಾಂಗುಲಂ ತು ವೈಶ್ಯಾನಾಂ**
**ಶೂದ್ರಾಣಾಂ ಸಪ್ತಸಮ್ಮಿತಮ್ ।**

**ಚತುರಂಗಲಮಾನಂ ತು**

**ನಾರೀಣಾಂ ನಾತ್ರ ಸಂಶಯಃ ।**

ಬ್ರಾಹ್ಮಣರು ಉಪಯೋಗಿಸುವ ದಂತಕಾಷ್ಠ ಹತ್ತು ಅಂಗುಲ ಉದ್ದವಿರಬೇಕು. ಕ್ಷತ್ರಿಯರಿಗೆ ಒಂಭತ್ತಂಗುಲ. ವೈಶ್ಯರಿಗೆ ಎಂಟು. ಶೂದ್ರರಿಗೆ ಏಳು. ಹೆಣ್ಣುಮಕ್ಕಳಿಗೆ ನಾಲ್ಕು ಅಂಗುಲ ಉದ್ದದ ದಂತಕಾಷ್ಠ.

ಸಂನ್ಯಾಸಿಗಳಿಗೆ ಹನ್ನೆರಡಂಗುಲದ ದಂತಕಾಷ್ಠ. ಸಮಸ್ತರಿಗೂ ಸಾಮಾನ್ಯವಾದ ಒಂದು ನಿಮಯ ಎಂಟು ಅಂಗುಲದ ದಂತಕಾಷ್ಠ. **ಅಷ್ಟಾಂಗುಲೇನ ಮಾನೇನ ತತ್ಪ್ರಮಾಣಮಿಹೋಚ್ಯತೇ** ಎಂದು ನರಸಿಂಹಪುರಾಣ ತಿಳಿಸುತ್ತದೆ.

ಹನ್ನೆರಡು ಅಂಗುಲಕ್ಕಿಂತ ಹೆಚ್ಚಿರಬಾರದು, ನಾಲ್ಕು ಅಂಗುಲಕ್ಕಿಂತ ಕಡಿಮೆ ಇರಬಾರದು ಎನ್ನುವದು ನಿಯಮ.

## ವಿಹಿತ ಕಾಷ್ಠಗಳು

ಯಾವ ಕಾಷ್ಠಗಳನ್ನು ದಂತಧಾವನಕ್ಕಾಗಿ ಉಪಯೋಗಿಸಬೇಕು ಎನ್ನುವದನ್ನು ನರಸಿಂಹಪುರಾಣ ತಿಳಿಸುತ್ತದೆ —

**ಸರ್ವೇ ಕಂಟಕಿನಃ ಪುಣ್ಯಾಃ**
**ಕ್ಷೀರಿಣಶ್ಚ ಯಶಸ್ವಿನಃ**
**ಅಷ್ಟಾಂಗುಲೇನ ಮಾನೇನ**
**ತತ್ಪ್ರಮಾಣಮಿಹೋಚ್ಯತೇ**

ಮುಳ್ಳಿರುವ ಗಿಡಗಳ ಕಾಷ್ಠ ಪುಣ್ಯಪ್ರದ. ಹಾಲಿರುವ ಗಿಡಗಳ ಕಾಷ್ಠ ಯಶಃಪ್ರದ. ಎಂಟು ಅಂಗುಲ ಉದ್ದವಿರಬೇಕು ಎನ್ನುವದು ಸಾಮಾನ್ಯವಾದ ನಿಯಮ.

## ದಂತಧಾವನದಲ್ಲಿ ದಿಕ್ಕುಗಳು

ಪೂರ್ವ ಅಥವಾ ಈಶಾನ್ಯ ದಿಕ್ಕಿಗೆ ಮುಖ ಮಾಡಿ ಕುಳಿತು ದಂತಧಾವನವನ್ನು ಮಾಡಬೇಕು. ಉಳಿದ ದಿಕ್ಕಿಗೆ ಮುಖ ಮಾಡಿ ಕುಳಿತು ಹಲ್ಲುಜ್ಜುವದರಿಂಗ

ಏನು ದುಷ್ಫಲವುಂಟಾಗುತ್ತದೆ ಎನ್ನುವದನ್ನು ಕಾತ್ಯಾಯನರು ತಿಳಿಸುತ್ತಾರೆ.

**ಪೂರ್ವಾಮುಖೋ ಧೃತಿಂ ವಿಂದ್ಯಾತ್**
**ಶರೀರಾರೋಗ್ಯಮೇವ ಚ**
**ದಕ್ಷಿಣೇನ ತಥಾ ಚೌರ್ಯಂ**
**ಪಶ್ಚಿಮೇನ ಪರಾಜಯಮ್**
**ಉತ್ತರೇಣ ಗವಾಂ ನಾಶಂ**
**ಸ್ತ್ರೀಣಾಂ ಪರಿಜನಸ್ಯ ಚ**
**ಪೂರ್ವೋತ್ತರೇ ತು ದಿಗ್ಭಾಗೇ**
**ಸರ್ವಾನ್ ಕಾಮಾನವಾಪ್ನುಯಾತ್**

ಪೂರ್ವದಿಕ್ಕಿಗೆ ಮುಖ ಮಾಡಿ ಹಲ್ಲುಜ್ಜುವದರಿಂದ ಧೈರ್ಯ ಮತ್ತು ಶರೀರದ ಆರೋಗ್ಯ ದೊರೆಯುತ್ತದೆ.

ದಕ್ಷಿಣ ದಿಕ್ಕಿಗೆ ಮುಖ ಮಾಡಿ ಹಲ್ಲುಜ್ಜುವದರಿಂದ ವ್ಯಕ್ತಿ ಹಣವನ್ನು ಕಳೆದುಕೊಳ್ಳುತ್ತಾನೆ. ಕಳ್ಳತನ ನಡೆಯುತ್ತದೆ.

ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಹಲ್ಲುಜ್ಜುವದರಿಂದ ಮನುಷ್ಯನಿಗೆ ಸೋಲುಂಟಾಗುತ್ತದೆ. ಕೆಲಸ ಕಾರ್ಯಗಳಲ್ಲಿ ವಿಘ್ನವುಂಟಾಗುತ್ತದೆ.

ಉತ್ತರ ದಿಕ್ಕಿಗೆ ಮುಖ ಮಾಡಿ ಹಲ್ಲುಜ್ಜುವದರಿಂದ ಮನೆಯಲ್ಲಿನ ಹಸು ಮುಂತಾದ ಪ್ರಾಣಿಗಳ ವಿನಾಶ, ಹೆಣ್ಣುಮಕ್ಕಳ, ಕೆಲಸದವರ ವಿನಾಶವುಂಟಾಗಿ ಮನುಷ್ಯ ಅಪಾರ ದುಃಖವನ್ನು ಅನುಭವಿಸುತ್ತಾನೆ.

ಈಶಾನ್ಯ ದಿಕ್ಕಿಗೆ ಮುಖ ಮಾಡಿ ಹಲ್ಲುಜ್ಜುವದರಿಂದ ಮನುಷ್ಯನ ಮನಸ್ಸಿನ ಎಲ್ಲ ಬಯಕೆಗಳೂ ಪೂರ್ಣವಾಗುತ್ತವೆ.

## ಹಲ್ಲುಜ್ಜುವ ಕ್ರಮ

ಇದನ್ನು ಆಶ್ವಲಾಯನರು ತಿಳಿಸುತ್ತಾರೆ —

**ವಾಗ್ಯತೋ ವಿಮೃಜೇದ್ ದಂತಾನ್**
**ಮಾಂಸಂ ನೈವ ತು ಪೀಡಯೇತ್**
**ಜಿಹ್ವಾಮಲಾಂತಮುದಿತಂ**
**ದಂತಾಂತರಿತಮೇವ ಚ**

ಹಲ್ಲುಜ್ಜುವ ಸಂದರ್ಭದಲ್ಲಿ ಮಾತನಾಡಬಾರದು. ದವಡೆಯ ಬಳಿಯಿರುವ ಮಾಂಸವನ್ನು, ಚರ್ಮವನ್ನು ಕಡ್ಡಿಯಿಂದ ಉಜ್ಜಬಾರದು. (ಹಲ್ಲುಜ್ಜಿದ ನಂತರ ಹೆಬ್ಬೆರಳು ಮತ್ತು ಉಂಗುರದ ಬೆರಳಿನಿಂದ ದವಡೆಯನ್ನು ತಿಕ್ಕಿಕೊಳ್ಳಬೇಕು)

ಹಲ್ಲುಗಳ ಸಂಧಿಯಲ್ಲಿರುವ, ಮತ್ತು ನಾಲಿಗೆಯಲ್ಲಿರುವ ಕೊಳೆ ಹೋಗುವಷ್ಟು ಹಲ್ಲು ಮತ್ತು ನಾಲಿಗೆಗಳನ್ನು ಉಜ್ಜಬೇಕು.

ಆ ನಂತರ ಹನ್ನೆರಡು ಬಾರಿ ಬಾಯಿ ಮುಕ್ಕಳಿಸಬೇಕು.

## ಉಳಿದ ಕಾಷ್ಠವನ್ನು ನೈರುತ್ಯದಲ್ಲಿ ಹಾಕಬೇಕು

ದಂತಕಾಷ್ಠದಿಂದ ದಂತಧಾವನವನ್ನು ಮಾಡಿದ ಬಳಿಕ ನೈಋತ್ಯದಿಕ್ಕಿನಲ್ಲಿ ಹಾಕಬೇಕು. ಮನೆಯ ನೈಋತ್ಯದ ಭಾಗ ತಿಪ್ಪೆಯ ಭಾಗ. ಮನೆಯಲ್ಲಿ ಉಪಯೋಗಿಸಿ ಉಳಿದ ಪದಾರ್ಥಗಳನ್ನು ಇಲ್ಲಿ ಹಾಕಿದಾಕ ಗೊಬ್ಬರವಾಗುತ್ತದೆ. ಹೀಗಾಗಿ ಈ ಪ್ರದೇಶದಲ್ಲಿ ದಂತಕಾಷ್ಠವನ್ನೂ ಹಾಕಬೇಕು.

ಬಚ್ಚಲು ಮನೆಯಲ್ಲಿ ಹಲ್ಲುಜ್ಜುವಾಗಲೂ ತನ್ನ ನೈಋತ್ಯದಲ್ಲಿ ಕಾಷ್ಠವನ್ನು ಹಾಕಿ ಆ ನಂತರ ತಿಪ್ಪೆಗೆ ಸೇರಿಸಬೇಕು.

ಹೀಗೆ ದಂತಧಾವನವನ್ನು ಮಾಡಿ, ಬಾಯಿ ಮುಕ್ಕಳಿಸಿ, ಕಾಲುಗಳನ್ನು ತೊಳೆದುಕೊಂಡು, ವರೆಸಿಕೊಂಡು ದೇವರ ಮನೆಯ ಬಳಿ ಬಂದು ಆಚಮನ ಮಾಡಿ ಪ್ರಾತಃಸ್ತೋತ್ರಗಳನ್ನು ಪಠಿಸಬೇಕು. ಅದರ ಕ್ರಮವನ್ನು ಮುಂದಿನ ಲೇಖನದಲ್ಲಿ ತಿಳಿಸುತ್ತೇನೆ.

## ದಂತಧಾವನಕ್ಕೆ ನಿಷಿದ್ಧದಿವಸಗಳು

ಇದರ ಕುರಿತು ಶಾಸ್ತ್ರದಲ್ಲಿ ಅನೇಕ ರೀತಿಯ ಮಾತುಗಳನ್ನು ಕೇಳುತ್ತೇವೆ. ಶ್ರೀಮಧ್ವಾನುಜಾಚಾರ್ಯರು ಅವೆಲ್ಲವನ್ನು ಸಂಗ್ರಹಿಸಿ ಸಂನ್ಯಾಸಪದ್ಧತಿಯಲ್ಲಿ ನಿರ್ಣಯ ನೀಡಿದ್ದಾರೆ —

**ಋತೇ ದಿನದ್ವಯಂ ವಿಷ್ಣೋಃ**
**ದತಾನಾಂ ಧಾವನಂ ಭವೇತ್**
**ಯತಿನಾಂ ವನಿನಾಂ ಚಾಪಿ**[2]
**ಗೃಹಿಣಾಮಷ್ಟಮೀಂ ತಥಾ**
**ಚತುರ್ದಶೀಂ ಪಂಚದಶೀಂ**
**ಜನ್ಮರ್ಕ್ಷಾಣಿ ರವಿಕ್ರಮಮ್**
**ದಂತಾನ್ನ ಶೋಧಯೇದ್ ಬ್ರಹ್ಮ-**
**ಚಾರೀ ವ್ರತಧರಸ್ತಥಾ**

ಹೆಣ್ಣುಮಕ್ಕಳು, ಗೃಹಸ್ಥರು, ವನಪ್ರಸ್ಥರು ಮತ್ತು ಸಂನ್ಯಾಸಿಗಳು ದಶಮೀ ಏಕಾದಶಿಗಳನ್ನು ಹೊರತು

---

[2] ವನಿತಾನಾಂ ಚ ಎಂದು ಸ್ಮೃತಿಮುಕ್ತಾವಲಿಯಲ್ಲಿ ಪಾಠವಿದೆ.

ಪಡಿಸಿ ಉಳಿದ ದಿವಸಗಳಲ್ಲಿ ದಂತಧಾವನ ಮಾಡಬಹುದು.

ಬ್ರಹ್ಮಚಾರಿಗಳು ಮತ್ತು ವ್ರತಧಾರಣೆ ಮಾಡಿರುವವರು ಅಷ್ಟಮೀ, ಚತುರ್ದಶೀ, ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಾಂತಿ ಮತ್ತು ಜನ್ಮನಕ್ಷತ್ರಗಳ ದಿವಸದಂದು ಹಲ್ಲುಜ್ಜಬಾರದು.

ಹಾಗೆಯ ಶ್ರಾದ್ಧಕರ್ತೃ ಹಲ್ಲುಜ್ಜಬಾರದು. ತಲೆಗೆ ಎಣ್ಣೆ ಹಚ್ಚಿಕೊಂಡು ಹಲ್ಲುಜ್ಜಬಾರದು.

## ನಿಷಿದ್ಧದಿವಸಗಳಲ್ಲಿ ಹಲ್ಲನ್ನು ಸ್ವಚ್ಛಗೊಳಿಸುವ ಕ್ರಮ

ನಿಷಿದ್ಧದಿವಸಗಳಲ್ಲಿ ಹಲ್ಲುಜ್ಜಬಾರದು ಎಂದರೆ ದಂತಕಾಷ್ಠಗಳಿಂದ ಹಲ್ಲುಜ್ಜಬಾರದು ಎಂದರ್ಥ. ಎಲೆಗಳಿಂದ ಹಲ್ಲುಜ್ಜಬಹುದು. ಏಕಾದಶಿ ಮತ್ತು ಅಮಾವಾಸ್ಯೆಗಳಂದು ಎಲೆಗಳಿಂದಲೂ ಹಲ್ಲುಜ್ಜಬಾರದು ಎಂದು ವಾಯುಪುರಾಣ ತಿಳಿಸುತ್ತದೆ — **ತೃಣಪರ್ಣೈ�ಃ ಸದಾ ಕುರ್ಯಾದಮಾಮೇಕಾದಶೀಂ ವಿನಾ** ಎಂದು.

**ಅಲಾಭೇ ದಂತಕಾಷ್ಠಾನಾಂ**

**ನಿಷಿದ್ಧಾಯಾಂ ತಥಾ ತಿಥೌ**
**ಅಪಾಂ ದ್ವಾದಶಗಂಡೂಷೈಃ**
**ಮುಖಶುದ್ಧಿರ್ಭವಿಷ್ಯತಿ**

ದಂತಕಾಷ್ಠಗಳು ದೊರೆಯದೇ ಇದ್ದಾಗ, ಮತ್ತು ಪರ್ಣಗಳನ್ನೂ ಯಾವ ದಿವಸ ಉಪಯೋಗಿಸಬಾರದು ಅಂತಹ ದಿವಸಗಳಲ್ಲಿ ಹನ್ನೆರಡು ಬಾರಿ ಬಾಯಿ ಮುಕ್ಕಳಿಸುವದರಿಂದ ದಂತಶೋಧನೆಯಾಗುತ್ತದೆ.

ಇದೂ ಸಹ ಒಂದು ಸಿದ್ಧಿ. ಹಲ್ಲುಗಳನ್ನು ಸದಾ ಸ್ವಚ್ಛವಾಗಿಟ್ಟುಕೊಳ್ಳುವವರು, ಮತ್ತು ದಂತಕಾಷ್ಠಗಳಿಂದ ನಿಯಮಿತವಾದ ಕ್ರಮದಲ್ಲಿ ಹಲ್ಲುಜ್ಜುವವರು ಈ ರೀತಿಯ ಸಿದ್ಧಿ ಗಳಿಸುತ್ತಾರೆ. ಅಂದರೆ, ಅವರ ಹಲ್ಲಿನಲ್ಲಿ ಕೊಳೆ ಶೇಖರಣೆಯಾಗುವ ಸಾಧ್ಯತೆಯೇ ಕಡಿಮೆಯಾಗಿರುತ್ತದೆ. ಹಾಗೂ ಕೇವಲ ಬಾಯಿ ಮುಕ್ಕಳಿಸುವದರಿಂದ ಹಲ್ಲುಜ್ಜಿದಾಗ ಉಂಟಾಗುವಷ್ಟು ಸ್ವಚ್ಛತೆ ಉಂಟಾಗಿಬಿಡುತ್ತದೆ.

ನನ್ನ ಪರಿಚಯದ ಒಬ್ಬ ವ್ಯಕ್ತಿಯಲ್ಲಿ ಈ ಗುಣವನ್ನು ಕಂಡಿದ್ದೆ. ಅವರು ಶ್ರಾದ್ಧ, ಏಕಾದಶಿ ಮುಂತಾದ ದಿವಸಗಳಲ್ಲಿ ಸರ್ವಥಾ ಹಲ್ಲುಜ್ಜುತ್ತಿರಲಿಲ್ಲ. ಕೇವಲ ಬಾಯಿ ಮುಕ್ಕಳಿಸುತ್ತಿದ್ದರು. ಆದರೆ, ಬಾಯಿಂದ ದುರ್ವಾಸನೆಯೂ ಬರುತ್ತಿರಲಿಲ್ಲ.

ವಿಚಿತ್ರ ಎಂದರೆ ಇವತ್ತಿ ಜನ ದಿವಸಕ್ಕೆ ಎರಡು ಬಾರಿ ಪೇಸ್ಟುಗಳಿಂದ ಹಲ್ಲುಜ್ಜಿದರೂ ದುರ್ವಾಸನೆ ಉಪಶಮನವಾಗುವದಿಲ್ಲ, ಅಷ್ಟೇ ಅಲ್ಲ ಅನೇಕ ಹಲ್ಲಿನ ರೋಗಗಳಿಂದ ಬಳಲುತ್ತಾರೆ.

ಶಾಸ್ತ್ರವನ್ನು ಅನುಸರಿಸಿದಲ್ಲಿ ಆರೋಗ್ಯವೂ ನಮ್ಮದಾಗುತ್ತದೆ, ಭಗವಂತನೂ ಒಲಿಯುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491